

ಜಾಣರ ಪೆಟ್ಟಿಗೆ

# ಜೊತೆ ಜೊತೆ ದಡ ಸೇರಲಿ

ಆಸಕ್ತಿ ಉಳಿಸಿಕೊಳ್ಳದೆ ಝೀ ಕನ್ನಡದ 'ಜೊತೆ ಜೊತೆಯಲಿ' ಸಾಗುತ್ತಿದೆ. ಆರಂಭವಾದಾಗ ತನ್ನ ವಿನೂತನ ಕಥೆ, ನಟ–ನಟಿಯರ ಭಾವಪೂರ್ಣ ಅಭಿನಯ, ರೋಚಕ ತಿರುವುಗಳಿಂದ ಮನಮೆಚ್ಚಿನ ಧಾರಾವಾಹಿ ಆಗಿತ್ತು. ಈಗ ಆರ್ಯವರ್ಧನ್ ವಿಭಜಿತ ವ್ಯಕ್ತಿತ್ವ ಹೊಂದಿರುವಂತೆ ತೋರಿಸಲಾಗುತ್ತದೆ. ಇದುವರೆಗೂ ಇಲ್ಲದಿದ್ದ ವ್ಯಕ್ತಿತ್ವದ ಸಮಸ್ಯೆ ಈಗ ಧಿಡೀರ್ ಆಗಿ ಏಕೆ ಕಾಣಿಸಿಕೊಂಡಿದೆ? ಈ ಹೊಸ ತಿರುವಿನಿಂದ ಆರ್ಯವರ್ಧನ್ ಪಾತ್ರ ಪೇಲವವಾಗಿದೆ. ಆದಷ್ಟು ಬೇಗ ಈ ಧಾರಾವಾಹಿ ಮುಗಿದರೆ ಒಳ್ಳೆಯದು.

–ಸಿ.ಎನ್. ಮುಕ್ತಾ ಮೈಸೂರು

# ಎಲಿಮಿನೇಟ್ ಮಾಡಲು ಆಟ

ಕಲರ್ಸ್‌ನ 'ಬಿಗ್ ಬಾಸ್' ಮನೆಯಲ್ಲಿ ಈವಾರ ಸುದೀಪ್ ಅವರನ್ನು ನೋಡದೆ, ಅವರ ಮಾತುಗಳನ್ನು ಕೇಳದೆ ಬೇಸರವಾಯಿತು. ಬಿಗ್ ಬಾಸ್ ಮನೆಯ ಸದಸ್ಯರಂತೆ ಅವರ ಬರುವಿಕೆಯನ್ನು ನಿರೀಕ್ಷೆ ಮಾಡುತ್ತಿರುತ್ತೇವೆ. ಅವರಿಲ್ಲದೆ ಕಾರ್ಯಕ್ರಮ ಹೇಗೆ ನಡೆಯಬಹುದು ಎಂದು ಯೋಚಿಸುತ್ತ ಇದ್ದೆವು. ಸ್ಪರ್ಧಿಗಳು ವಾರಾಂತ್ಯದ ಕಾರ್ಯಕ್ರಮಕ್ಕೆ ಯಾವುದೋ ಸಮಾರಂಭಕ್ಕೆ ಹೋಗುವ ಹಾಗೆ ಸಿದ್ಧವಾಗುತ್ತಿದ್ದರು. ಈ ವಾರ ಅದೇನೂ ಇಲ್ಲ. ಮನೆಯ ಸದಸ್ಯರು ಸುದೀಪ್ ಅವರಿಗೆ ಪತ್ರ ಬರೆದದ್ದು, ಅವರಿಗಾಗಿ ಅವರ ಇಷ್ಟದ ಅಡುಗೆ ಮಾಡಿದ್ದು, ಅದಕ್ಕೆ ಸುದೀಪ್ ಪ್ರತಿಕ್ರಿಯಿಸಿದ್ದು ವಿಶೇಷವಾಗಿತ್ತು. ಕೊನೆಗೆ ಮನೆಯ ಒಬ್ಬ ಸದಸ್ಯನನ್ನು ಎಲಿಮಿನೇಟ್ ಮಾಡಲು ಕೆಲವು ಆಟಗಳನ್ನು ಆಡಿಸಲಾಯಿತು. ಸುದೀಪ್ ಅವರು ಬೇಗ ಗುಣಮುಖರಾಗಿ ವಾಪಸ್ ಬರಲಿ ಎಂದು ಹಾರೈಸೋಣ.

–ಕೆ.ಎಸ್. ಸವಿತ, ಬೆಂಗಳೂರು

# ಪ್ರಸಾರದಷ್ಟೇ ಪ್ರಚಾರವೂ ಮುಖ್ಯ

ಕಲರ್ಸ್ ಸೂಪರ್‌ನಲ್ಲಿ ಹಲವು ಉತ್ತಮ ಧಾರಾವಾಹಿಗಳನ್ನು ಕನ್ನಡಕ್ಕೆ ಡಬ್ಬಿಂಗ್ ಮಾಡಿ ಪ್ರಸಾರ ಮಾಡುತ್ತಿದ್ದಾರೆ. ಇದರಿಂದ ಕನ್ನಡಿಗರಿಗೆ 'ಅಶೋಕ ಚಕ್ರವರ್ತಿ' ಎಂಬ ಅತ್ಯುತ್ತಮ ಧಾರಾವಾಹಿ ನೋಡುವ ಅವಕಾಶ ಕಲ್ಪಿಸಲಾಗಿದೆ. ಆದರೆ 'ಮಹಾನಾಯಕ'ಕ್ಕೆ ಸಿಕ್ಕ ಪ್ರಚಾರ ಈ ಧಾರಾವಾಹಿಗೆ ಸಿಕ್ಕಿಲ್ಲ. ಪ್ರಪಂಚದ ಇತಿಹಾಸದಲ್ಲಿ ಶಾಂತಿಯ ಸಂದೇಶವನ್ನು ಸಾರಿದ ಮೊದಲ ಚಕ್ರವರ್ತಿ ಅಶೋಕನ ಚರಿತ್ರೆಯನ್ನು ಎಲ್ಲರೂ ತಿಳಿದುಕೊಳ್ಳಬೇಕು. ವಾಹಿನಿಯವರು ತಮ್ಮ ಈ ಧಾರಾವಾಹಿ ಪ್ರಸಾರದ ಬಗ್ಗೆ ಪ್ರಚಾರ ಮಾಡಬೇಕು. ಒಂದು ಐತಿಹಾಸಿಕ ಧಾರಾವಾಹಿ ನಿರ್ಮಾಣ ಅಷ್ಟು ಸುಲಭವಲ್ಲ. ಭಾರತದ ನಮ್ಮ ಹೆಮ್ಮೆಯ ಅಶೋಕನ ಧಾರಾವಾಹಿ ರಾಮಾಯಣ– ಮಹಾಭಾರತ ಧಾರಾವಾಹಿಯಷ್ಟೇ ಉತ್ತಮ ಪ್ರಯತ್ನ. ಅದಕ್ಕೊಂದು ಸಲಾಂ ಹೇಳಲೇಬೇಕು.

–ಪುಷ್ಪಾ ಶ್ರೀರಾಮ್, ಬೆಂಗಳೂರು

ವಾರದ ಪತ್ರ

# ಬೇವು ಬೆಲ್ಲದ ಜೊತೆ ವಿಷ!

ಯುಗಾದಿ ಹಬ್ಬದ ವಿಶೇಷ ಧಾರಾವಾಹಿಯ ಸಂಚಿಕೆಗಳು ಈ ವಾರ ವೈಭವದಿಂದ ಪ್ರಸಾರವಾದವು. ಪೈಪೋಟಿಯ ಮೇಲೆ ಯುಗಾದಿ ಹಬ್ಬದ ಆಚರಣೆ ಮಾಡಿದ ರೀತಿ ನೋಡಿದರೆ ಅಸಹ್ಯ ಆಗದೆ ಇರಲಾರದು.

ಝೀ ಕನ್ನಡದ 'ಪಾರು'ನಲ್ಲಿ ಬೇವು– ಬೆಲ್ಲ ಹಂಚುವ ದೃಶ್ಯ ಇತ್ತು. ಉಂಗುರದಲ್ಲಿ ಬಚ್ಚಿಟ್ಟುಕೊಂಡ ವಿಷದ ಪುಡಿಯನ್ನು ಬೇವು ಬೆಲ್ಲಕ್ಕೆ ಸೇರಿಸಿ ಕೊಡುವ ವಿಕೃತ ಮನಸ್ಸಿನ ಖಳನಾಯಕಿಯ ಕೃತ್ಯ ಅಮಾನವೀಯವಾದದ್ದು. ಇದು ನಿಜಕ್ಕೂ ಖಂಡನೀಯ. ಇದಕ್ಕೆ ಪೂರಕವಾಗಿ ಯಾರೋ ಒಬ್ಬ ನಿರ್ದೇಶಕರು ಇತ್ತೀಚೆಗೆ 'ಹೆಚ್ಚು ಹೆಚ್ಚು ಕ್ರೌರ್ಯ ಮತ್ತು ಹಿಂಸೆ ಇದ್ದಷ್ಟೂ ಧಾರಾವಾಹಿಯ ನಾಯಕ–ನಾಯಕಿಯ ಪಾತ್ರ ಗಟ್ಟಿಯಾಗುತ್ತಾ ಹೋಗುತ್ತದೆ. ವೀಕ್ಷಕರ ಅನುಕಂಪ ಗಿಟ್ಟಿಸಿಕೊಳ್ಳುತ್ತವೆ' ಎಂದು ಹೇಳಿದ್ದನ್ನು ಬೇರೆ ಎಲ್ಲೋ ಓದಿದ್ದೆ. ಕ್ರೌರ್ಯವನ್ನು ಸಮರ್ಥಿಸುವ ಅವರ ಮಾತಿಗೆ ಅಳಬೇಕೋ ನಗಬೇಕೋ ಗೊತ್ತಾಗಲಿಲ್ಲ. ಕ್ರೌರ್ಯ ಮೆರೆಸುವ ನಿರ್ದೇಶಕರಿಗೆ ಬಡ ವೀಕ್ಷಕರ ಮೇಲೆ ಅನುಕಂಪ ಇಲ್ಲದೆ ಇರುವುದು ವಿಪರ್ಯಾಸ.

–ಆರ್. ವೀರೇಶ್ ಕುಮಾರ್, ಬೆಂಗಳೂರು

# ಹಬ್ಬ ಖಂಡಿತ ಬೇಡ

ವಾಹಿನಿಗಳಲ್ಲಿ ಪ್ರಸಾರವಾಗುವ ಧಾರಾವಾಹಿಗಳು ಯಾವಾಗಲೂ ನೈಜ ಕಥೆಯಿಂದ ದೂರವೇ ಉಳಿಯುತ್ತವೆ. ಸರಿ ಇಲ್ಲದ ಸರಕನ್ನು ಕಥೆಗೆ ತುಂಬಿ ರಬ್ಬರ್ ರೀತಿ ಎಳೆದು ವೀಕ್ಷಕರನ್ನು ಸತಾಯಿಸುತ್ತಾರೆ. ಅಷ್ಟರ ಮಧ್ಯೆ ಹಬ್ಬಗಳ ಸಾಲು ಸಾಲು... ಹಬ್ಬ ಕಲಾವಿದರು ಖಾಸಗಿಯಾಗಿ ಮಾಡಿಕೊಳ್ಳಲಿ ಆದರೆ, ಅದನ್ನು ವಾರಗಟ್ಟಲೆ ತುರುಕುವುದು ಎಷ್ಟು ಸರಿ. ಹಬ್ಬದ ಸರಕನ್ನು ಕಥೆಗೆ ತುಂಬಿ ವೀಕ್ಷಕರ ಸಹನೆ ಕೆಡಿಸುವುದು ಬೇಡ. ಹಬ್ಬದ ದೃಶ್ಯ ವೀಕ್ಷಕರಿಗೆ ಒಂದು ವಾರ ತಲೆ ಚಿಟ್ಟು ಹಿಡಿಯುತ್ತದೆ. ಹಬ್ಬಗಳ ದೃಶ್ಯ ಖಂಡಿತ ಬೇಡ.

–ಎನ್.ಎಸ್. ಚಂದ್ರಶೇಖರ್, ಬೆಂಗಳೂರು

# 'ಗೀತಾ' ಹಳಿ ತಪ್ಪಿದಳು

ಕೆಲವು ತಿಂಗಳುಗಳ ಹಿಂದೆ ಕಲರ್ಸ್ ಕನ್ನಡ ಪ್ರಸ್ತುತಪಡಿಸುತ್ತಿರುವ ಎಲ್ಲ ಧಾರಾವಾಹಿಗಳಿಗಿಂತ ಗೀತಾ ಧಾರಾವಾಹಿ ಒಂದು ಅತ್ಯುತ್ತಮ ಧಾರಾವಾಹಿಯಾಗಿ ಮೂಡಿಬರುತ್ತಿತ್ತು ಆದರೆ ಗೀತಾಳ ಹುಚ್ಚುತನದಿಂದ ಕಥೆ ತನ್ನತನವನ್ನು ಕಳೆದುಕೊಂಡುಬಿಟ್ಟಿತು. ಈ ಬೆಳವಣಿಗೆಯನ್ನು ನೋಡಿದರೆ ಪಂಚತಂತ್ರದ 'ಹಾಳುಮಾಡಲು ಹೋಗಿ ಹಾಳಾಗಿಹೋದ ಟಟ್ಟಿಬನ ಕಥೆ' ಜ್ಞಾಪಕಕ್ಕೆ ಬರುತ್ತದೆ.

–ಸಿ.ಆರ್. ಶ್ರೀನಿವಾಸ, ಬೆಂಗಳೂರು

# ಸಮಯ ಬದಲಾಗಲಿ

ಟಿ.ವಿ. 5 ಕನ್ನಡ ವಾಹಿನಿಯಲ್ಲಿ ಬೆಳಿಗ್ಗೆ 'ನಮ್ಮ ಬಾಹುಬಲಿ' ಕಾರ್ಯಕ್ರಮ ಸ್ಫೂರ್ತಿದಾಯಕವಾಗಿದೆ. ಮನೆ ಮಂದಿ ಎಲ್ಲರೂ ಯಾವುದೇ ಮುಜುಗರ ಇಲ್ಲದೆ ವೀಕ್ಷಿಸಬಹುದು. ದಿನವೂ ಒಬ್ಬರ ಸಂದರ್ಶನ ಚೆನ್ನಾಗಿ ಮೂಡಿಬರುತ್ತಿದೆ. ಇದೇ ಕಾರ್ಯಕ್ರಮವನ್ನು ಎಲ್ಲರೂ ವೀಕ್ಷಿಸಲು ಅನುಕೂಲವಾಗುವಂತೆ ರಾತ್ರಿ 7 ಗಂಟೆಯ ನಂತರ ಸೂಕ್ತ ಸಮಯದಲ್ಲಿ ಪ್ರಸಾರ ಮಾಡಿದರೆ ಆಸಕ್ತಿ ಇರುವ ವೀಕ್ಷಕರೆಲ್ಲರೂ ನೋಡಬಹುದೆಂದು ನನ್ನ ಅಭಿಪ್ರಾಯ.

–ವಿ. ಹೇಮಂತ ಕುಮಾರ್, ಬೆಂಗಳೂರು

# ಕೊರೊನಾ ಮುನ್ನೆಚ್ಚರಿಕೆ

ಹೊರಗೆ ಹೋಗಬೇಕೆಂದರೆ ಕೊರೊನಾ ಭಯ. ಮನೆಯಲ್ಲಿದ್ದರೆ ಟೀವಿಯಲ್ಲಿ ಕೊರೊನಾದ್ದೇ ಭಯಾನಕ ಪ್ರವಾಹ. ಅಂಥದ್ದರಲ್ಲಿ ಆರೋಗ್ಯಕರ ಜೀವನ ಶೈಲಿಗಾಗಿ 'ಆಯುಷ್' ವಾಹಿನಿ ರೂಪಿಸಿರುವ 'ಕೊರೊನ ಮುನ್ನೆಚ್ಚರಿಕೆ' ನೋಡುವಂತೆ ಮಾಡಿದ್ದಾರೆ. ವೈರಸ್‌ಗಿಂತಲೂ ಸುಳ್ಳು ವದಂತಿಗಳೇ ಹೆಚ್ಚು ಭೀತಿಯನ್ನು ಹುಟ್ಟಿಸುತ್ತಿವೆ. ಹೀಗಾಗಿ, ಧೈರ್ಯದಿಂದ ತಜ್ಞರು ನೀಡುವ ಮಾರ್ಗಸೂಚಿ ಪಾಲಿಸುವುದು ಅವಶ್ಯ. ಡಾ.ರಾಜು ಉಪಯುಕ್ತ ಸಲಹೆ ಹಾಗೂ ವೀಕ್ಷಕರ ಪ್ರಶ್ನೆಗಳಿಗೆ ಸಮಾಧಾನಕರ ಉತ್ತರಗಳನ್ನೂ ನೀಡಿದ್ದಾರೆ.

ಕೊರೊನಾ ಲಸಿಕಾ ವಿಭಾಗದ ಉಪನಿರ್ದೇಶಕರಾದ ಡಾ. ರಜನಿ ಬಿ.ಎಸ್ ಲಸಿಕೆಯನ್ನು ತೆಗೆದುಕೊಳ್ಳಲು ಹಿಂದೆ ಮುಂದೆ ನೋಡುವ ನೂರಾರು ವೀಕ್ಷಕರ ಪ್ರಶ್ನೆಗಳಿಗೆ ಉತ್ತರಿಸುತ್ತಾ ಕೊರೊನಾ 2ನೇ ಅಲೆಯ ಬಗೆಗೆ ಎಚ್ಚರಿಕೆ ನೀಡಿದ್ದಲ್ಲದೆ ಧೈರ್ಯದಿಂದ ಮಹಾಮಾರಿಯನ್ನು ಎದುರಿಸಲು ಸಲಹೆಗಳನ್ನು ನೀಡಿದರು.

ಜನರಲ್ಲಿರುವ ವೈರಸ್ಸಿನ ಆತಂಕ, ಭಯದ ದುರುಪಯೋಗ ಆಗುತ್ತಿರುವ ಈ ಸಂದರ್ಭದಲ್ಲಿ ಜನರಲ್ಲಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಆಯುಷ್ ಉತ್ತಮ ಕಾರ್ಯಕ್ರಮ ನೀಡಿದೆ.

–ರಘುನಾಥರಾವ್ ತಾಪ್ಸೆ, ದಾವಣಗೆರೆ